# ತಿಟ್ಹತ್ತಿ ತಿರುಗಿ ನೋಡಿದಾಗ

ಇತ್ತೀಚೆಗೆ ಪ್ರಕಟವಾದ ಹೆಚ್.ಆರ್. ಸುಜಾತಾ ಅವರ ಲೇಖನಗಳ ಸಂಕಲನ 'ನೀಲಿ ಮೂಗಿನ ನತ್ತು' ಇದು ಏಕ ಕಾಲಕ್ಕೆ ನೆನಪುಗಳನ್ನೂ, ಕಥನ ರೂಪದ ಬಾಲ್ಯವನ್ನೂ ಒಳಗೊಳ್ಳುವ ಕೃತಿ. ಈ ಕೃತಿ ವಿಶೇಷವಾಗುವುದೇ ತನ್ನ ನಿರೂಪಣಾ ಶೈಲಿಯಿಂದ. ತಾನು ಹುಟ್ಟಿದ ಗ್ರಾಮದಿಂದ ದೂರವೇ ಉಳಿದು ವಿದ್ಯಾಭ್ಯಾಸ, ಮದುವೆ ಈ ಎಲ್ಲಾ ಕಾಲದ ಪಯಣಗಳ ನಂತರ ತನ್ನ ಬಾಲ್ಯದ ನೆನಪುಗಳ ಗಣಿಯನ್ನು ಆನಂದದಿಂದ ಅವಲೋಕಿಸುತ್ತಿರುವ ಕ್ರಮವೊಂದು ಇಲ್ಲಿ ಅನಾವರಣಗೊಂಡಿದೆ. ಇದನ್ನು ಸರಳವಾಗಿ ಹೇಳಬಹುದಾದರೆ ಮದುವೆಯಾಗಿ ಗಂಡನ ಮನೆಗೆ ಹೊರಟ ಹೆಣ್ಣು ನಡುನಡುವೆ ನಿಂತು ತೌರಿನ ಹಾದಿಯನ್ನು 'ತಿಟ್ಹತ್ತಿ ತಿರುಗಿ' ನೋಡುವುದಾಗಿದೆ. ಈ ರೀತಿ ನೋಡುವ ಕ್ರಮದಲ್ಲಿ ತೊಡಗಿದ ಮಗಳು ಈಗ ತಾನೆ ಮದುವೆಯಾಗಿ 'ಹೊರವಂಟಳಲ್ಲಿ' ಹಲವು ದಶಕಗಳ ನಂತರ ತನ್ನ ನೆಲದಿಂದ ದೂರಾಗಿ, ನೆನಪುಗಳಿಂದ ದೂರಾದವಳು ಮಾಗಿದ ಮನಸ್ಸು, ಕಳೆದ ಶ್ರೀಮಂತ ನೆನಪುಗಳಿಂದ ಗತವನ್ನು ಚಿತ್ರಿಸ ಹೊರಟಿದ್ದಾಳೆ.

ತನ್ನ ಗ್ರಾಮವನ್ನು, ನಗರದಲ್ಲಿ ವಿದ್ಯಾಭ್ಯಾಸ ಪಡೆಯ ಹೊರಟ ನಿರೂಪಕಿ. ಮದುವೆಯಾಗಿ ನಗರದಲ್ಲಿ ನೆಲೆಸಿದ ನಿರೂಪಕಿ ಕಂಡ ಗ್ರಾಮಕ್ಕೂ, ಈಗ ಮರು ಭೇಟಿಯಾಗುತ್ತಿರುವ ಗ್ರಾಮಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಈ ವ್ಯತ್ಯಾಸ ಅಥವಾ ಈ ಅಂತರವನ್ನು ತನ್ನ ಪ್ರೀತಿ ಮತ್ತು ಕುತೂಹಲದಿಂದಲೇ ಕ್ರಮಿಸಲು ಯತ್ನಿಸುವ ಪ್ರಯತ್ನವಿದೆ. 'ನೀಲಿ ಮೂಗಿನ ನತ್ತು' ಹೆಸರೇ ಸೂಚಿಸುವಂತೆ ನೀಲಿ ಬಣ್ಣದ ಆಹ್ಲಾದತೆಯನ್ನು, ಅದರ ಚೆಂದದ ಬದುಕನ್ನು ಆವರಣಗೊಳಿಸುವಂತದ್ದು. ಈ ನೀಲಿ ಬಣ್ಣದ ಕುಸುರಿ ಕೆಲಸದ ನತ್ತಿನ ಹೊಳಪಲ್ಲಿ ಎಣ್ಣೆ ಹಿಡಿದ ನತ್ತುಗಳು ಅಷ್ಟಾಗಿ ಮುಖ ತೋರುವುದಿಲ್ಲ.

ಇಲ್ಲಿನ ನಿರೂಪಕಿ ಒಂದು ಕಾಲದಿಂದ ಇನ್ನೊಂದು ಕಾಲಕ್ಕೆ ಪ್ರಯಾಣ ಮಾಡುತ್ತಿದ್ದಾಳೆ. ಬಳಸಿ ಮರೆತ ಗ್ರಾಮ್ಯಭಾಷೆಯನ್ನು ಮರು ರೂಪಿಸಿಕೊಂಡಿದ್ದಾಳೆ. ಗ್ರಾಮ್ಯ ಭಾಷೆ, ಹೇಳುವ ಕ್ರಮದಲ್ಲಿನ ಪ್ರೀತಿ, ಅಭಿಮಾನ ಸಲೀಸಾಗಿ ಓದಿಸಿಕೊಂಡು ಹೋಗುತ್ತದೆ. ಇಲ್ಲಿನ ಬಹುತೇಕ ನಿರೂಪಣೆಗಳು ಸ್ತ್ರೀಪರವಾದವು, ಸ್ತ್ರೀಕೇಂದ್ರಿತವಾದವು. ಕುಟುಂಬವನ್ನು ಎಂತಹ ಸಂದರ್ಭದಲ್ಲಿಯೂ ಹಿಡಿದು ನಿಲ್ಲಿಸಬಲ್ಲ ಹೆಣ್ಣ ಶಕ್ತಿಯ ಶೋಧಕ್ಕೆ ತೊಡಗಿದಂತವು. ಹೀಗಾಗಿ ಇಲ್ಲಿಯ ಮೂಲ ಭಾವವೇ ಆರಾಧನೆ. ಆರಾಧನೆಗೆ ತೊಡಗಿದಾಗ ಬೆಳಕಿನ ಆರಾಧನೆ ಪ್ರಧಾನವಾಗಿ ಬೆನ್ನ ಹಿಂದಿನ ನೆರಳು ಮರೆತು ಹೋಗುವುದುಂಟು. ಈ ಕುಂದನ್ನು ಮರೆಯಿಸುವ ಹಾಗೆ ಸಡಗರದ ಸಂಭ್ರಮದ ವಾತಾವರಣವೊಂದು ಇಲ್ಲಿ ಸೃಷ್ಟಿಯಾಗುತ್ತದೆ.

ಈ ಸಂಕಲನದ ಹೆಸರಿನ ಒಂದು ಲೇಖನ 'ನೀಲಿ ಮೂಗಿನ ನತ್ತು'. ಈ ಲೇಖನದಲ್ಲಿ ಎರಡು ಕುಟುಂಬಗಳ ಚಿತ್ರಣವಿದೆ. ಎರಡು ತಾಯ್ತನಗಳ ವರ್ಣನೆಗಳಿವೆ. ಇಲ್ಲಿನ ಸ್ತ್ರೀ ಲೋಕದ ಅನಾವರಣದಲ್ಲಿ ಕೂಡು ಕುಟುಂಬದ ಸಂತಸ, ದುಃಖ–ದುಮ್ಮಾನಗಳಿವೆ. ತಮ್ಮ ಕರುಗಳನ್ನು ಕೊಟ್ಟಿಗೆಗಳಲ್ಲಿ ಮೇಯಲು ಬಿಟ್ಟು ಬಯಲಿಗೆ ಮೇಯಲು ಹೋಗುವ ದನಗಳ ಮನಸ್ಸೆಲ್ಲಾ ಬಿಟ್ಟು ಬಂದ ಕೊಟ್ಟಿಗೆಯಡೆಗೆ ಕೊಟ್ಟಿಗೆಯಲ್ಲಿರುವ ಕರುಗಳ ಮನಸ್ಸೆಲ್ಲಾ ಬಯಲಲ್ಲಿ ಮೇಯುವ ತಾಯಿದನದೆಡೆಗೆ ಈ ಕುಟುಂಬದ ಯಜಮಾನ ತನ್ನ ಮಕ್ಕಳು ತನ್ನಂತೆ ಹಳ್ಳಿಯಲ್ಲಿ ಕಷ್ಟಪಡದಿರಲಿ ಎಂದು ತನ್ನ ಎಂಟೂ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ನಗರದಲ್ಲಿ ಇರಿಸಿದ್ದಾನೆ. ತನ್ನ ಹಳ್ಳಿಗೂ, ನಗರಕ್ಕೂ ನಿರಂತರ ಯಾನ ಅವನದು. ತಾಯಿ ಕರುಳು ಗಂಡನ ಕಷ್ಟವನ್ನು, ಮಕ್ಕಳ ವಿರಹವನ್ನು ಏಕಕಾಲಕ್ಕೆ ಅನುಭವಿಸುತ್ತದೆ. ಗ್ರಾಮವನ್ನು ತೊರೆದು ಬದುಕು ರೂಪಿಸಿಕೊಳ್ಳಲು ಹೊರಟ ಬಹುತೇಕ ಗ್ರಾಮೀಣ ಕುಟುಂಬಗಳ 'ಬೇರನ್ನು ತೊರೆದು ಇರಲಾರದ ಯಾತನೆಯ' ಹಲವು ಸಂಕಷ್ಟಗಳು ಈ ಕತೆಯಲ್ಲಿ ಚಿತ್ರಿತವಾಗಿವೆ.

ಕರುಗಳನ್ನು ಬಿಡಲಾರದೆ ಬಿಟ್ಟು ಮೇಯುವುದಕ್ಕೆ ಹೋಗುವ ತಾಯಿ ದನ, ಮುಂದಿನ ಭವಿಷ್ಯವನ್ನು ಕಟ್ಟಿಕೊಳ್ಳಲು ತಂದೆ–ತಾಯಿ, ಹುಟ್ಟಿದ ಊರನ್ನು ತೊರೆದು ಹೋಗುವ ಮಕ್ಕಳು, ಈ ತೊರೆಯುವಿಕೆಯ ಯಾತನೆ ಇಲ್ಲಿ ಸ್ಪಷ್ಟವಾಗಿ ಚಿತ್ರಿತವಾಗಿದೆ. ಇದೇ ಕುಟುಂಬದಲ್ಲಿ ಕೆಲಸ ಮಾಡುವ ನೀಲಿಯದು ಇನ್ನೊಂದು ಕಥನ. ರೋಗದಿಂದ ನರಳುತ್ತಿರುವ ತನ್ನ ಮಗನನ್ನು ಹಾಸನದ ಆಸ್ಪತ್ರೆಗೆ ಸೇರಿಸಲು ಹಣದ ನೆರವನ್ನು ಈ ಕಥೆಯ ಕೇಂದ್ರವಾದ ಒಡತಿ ರಂಗವ್ವನನ್ನು ಕೇಳುತ್ತಿದ್ದಾಳೆ. ರಂಗವ್ವ ಮನೆಯ ಯಜಮಾನತಿಯಾದರೂ ಸ್ವತಂತ್ರವಾಗಿ ಹಣಕಾಸಿನ ವ್ಯವಹಾರಕ್ಕೆ ಕೈಹಾಕದವಳು. ಈಗ ಸಂದಿಗ್ಧಕ್ಕೆ ಸಿಕ್ಕಿ ಹಾಕಿಕೊಂಡೇ ಮೂವತ್ತು ಸೇರು ರಾಗಿಯನ್ನು ನೀಲಿಯ ಮಗನ ವೈದ್ಯಕೀಯ ಖರ್ಚಿಗೆ ಕೊಡಲು ನಿರ್ಧರಿಸುತ್ತಾಳೆ. ನೀಲಿ ತನ್ನ ಮೂಗಿನ ನತ್ತನ್ನು ಅಡವಾಗಿ ಇಡಲು ಯತ್ನಿಸಿದರೂ ಅದು 'ಬೇಡದ ಪರರ ಒಡವೆ' ಎಂದು ನಿರಾಕರಿಸಿ ರಂಗವ್ವ ಔದಾರ್ಯ ಮೆರೆಯುತ್ತಾಳೆ. ಮನೆಯಲ್ಲಿ ವಯಸ್ಸಾದ ಅತ್ತೆ ಇವಳ ವಹಿವಾಟನ್ನು ನೋಡಿಯೂ ನೋಡದಂತೆ ಇದ್ದು ಮನಸ್ಸಿನಲ್ಲೆ ಅವಳ ಮಾನವೀಯತೆಯನ್ನು ಮೆಚ್ಚಿಕೊಳ್ಳುತ್ತಾಳೆ. ಉರಿಯ ಬೆಳಕಲಿ ಮಿನುಗುವ ಸೊಸೆಯ ಮೂಗಿನ ನತ್ತನ್ನು ಕಂಡ ಅತ್ತೆಯ ಮನಸಲಿ ಮೂಡುವ ಮಾತು 'ಇವ್ಳು ಹಿಂಗಿದ್ದಾಳೇ ಅಂತಲೇ ಅಲ್ಲವಾ ಈ ಮನೆ ಹಿರೇರು, ಕಿರೇರು ಮೂರು ವರ್ಷ ಇವರಪ್ಪನ ಮನೆ ಹೊಸ್ತಿಲು ಕಾದು ಮಗನ ಹಠಕ್ಕೆ ಬಗ್ಗಿ ಇವಳ ತಂದುಕೊಂಡಿದ್ದು. ಇಡೀ ಕತೆಯಲ್ಲಿ ಹತ್ತಿದ ಒಲೆ ಕೊನೆಯವರೆಗೂ ಉರಿಯುತ್ತಲೇ ಇದೆ. ಕೊಟ್ಟಿಗೆಯಲ್ಲಿ ಮತ್ತು ಅಡುಗೆ ಮನೆಯಲ್ಲಿ. ಹೀಗೆ ಇಡೀ ಕಥನ ಜೀವನ ಪ್ರೀತಿ ಮತ್ತು ಮಾನವೀಯ ಪ್ರೀತಿಗಳ ಸಂಗಮವಾಗಿಯೇ ಮುಂದುವರೆಯುತ್ತದೆ.

ಈ ಮೇಲಿನ ಕಥೆ 'ರಂಗವ್ವನೆಂಬ' ಪಾತ್ರದ ಮೂಲಕ ಸಾಗಿದರೆ 'ಶಿವಮ್ಮನ ಗಾದಿ' ಒಂದು ಕುಟುಂಬವನ್ನು ಎತ್ತಿ, ಕಟ್ಟಿ ನಿಲ್ಲಿಸಿದ ಯಾವ ಗಂಡಸಿಗಿಂತಲೂ ಮಿಗಿಲಾದ ಪಾತ್ರ. ಊರ ಹಿರಿಯರ ಬಾಯಲ್ಲಿ 'ಗಟ್ಟಿಗಿತ್ತಿ ಹೆಣ್ಣು ಅಂದ್ರೆ ಹೆಣ್ಣು, ಛಲಗಾತಿ' ಎಂಬ ಹೊಗಳಿಕೆಗೆ ಪಾತ್ರವಾಗುವಳು. ತಾನು ಮದುವೆಯಾಗದೆ ತಮ್ಮನನ್ನು, ತಮ್ಮನ ಕುಟುಂಬವನ್ನು ಗಂಡಾಳಿನಂತೆ ದುಡಿದು ನಿಲ್ಲಿಸಿದವಳು. ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ 'ಗಂಡು ಹೊರಗೆ ದುಡಿಯಬೇಕು, ಹೆಣ್ಣು ಒಳಗೆ ದುಡಿಯಬೇಕು' ಎಂಬ ಸಾಮಾನ್ಯ ನಂಬಿಕೆಗಳನ್ನು, ಹೇಳಿಕೆಗಳನ್ನು ಮೀರಿ 'ಗೆಯ್ಮೆ ಅಂದರೆ ಶಿವಮ್ಮಂದು, ಶಿವಮ್ಮ ಬತ್ತಾವ್ಳೆ, ಅರೆ ಸರೀಗೆ ಹೊಡಿರೋ' ಎಂಬ ಮಾತುಗಳಿಗೆ ನಿಲುಕಿದವಳು. ಪ್ರಾಯದ ದಿನಗಳಲ್ಲೂ ಕೂಡ ಜನ ತನ್ನ ಬಗ್ಗೆ ಚಕಾರವೆತ್ತದ ಹಾಗೆ 'ನಡೆನುಡಿಯ' ಉಳಿಸಿಕೊಂಡ ಅವಳು ಗಂಡಾಳು ಹೊಲದಲ್ಲಿ ಮಾಡುವ ಕೆಲಸವನ್ನು ಸಲೀಸಾಗಿ ಮಾಡುತ್ತಿದ್ದವಳು. ಹಿರಿಯರು ಶಿವಮ್ಮನ ಬಗ್ಗೆ ದುಡಿಮೆಲ್ಲೂ, ಬಾಳ್ವೆಯಲ್ಲಿ ಯಾವ ಲಿಂಗಬೇಧವಿಲ್ಲದೆ ಸರಿಸಮನಾಗಿ ಬದುಕಿದ ಬಗ್ಗೆ ಮೆಚ್ಚುಗೆಯ ಮಾತನಾಡುತ್ತಾರೆ. ಕಿರಿಯರು ಮೆಚ್ಚುಗೆಯಿಂದ 'ಅಜ್ಜಯ್ಯನ ಕುಟೆ ಮಾತಾಡಕಂಡು ಕುಕ್ಕರಗಾಲಿನಲ್ಲಿ ಕುತ್ಕಂಡು ಬೀಡಿ ಧಮ್ಮ ಎಂಗೆ ಎಳಯದು ಗೊತ್ತಾ? ಆವಮ್ಮ ನ್ಯಾಯ ತೀರ್ಮಾನ ಮಾಡಕೂ ಬರದು ನಮ್ಮೂರಿಗೆ' ಎಂದು ನುಡಿವರು.

ಇಂತಹ ಹಲವು ಸ್ತ್ರೀ ಚೈತನ್ಯಗಳು, ದೇವತೆಗಳು, ಕಾಯುವ ನಂಬಿಕೆಗಳು, ಹಳ್ಳಿಯ ಸರಳ ಸುಂದರ ಸಂಬಂಧಗಳು ಈ ಸಂಕಲನದ ಹಲವು ನೆನಪಿನ ಲೇಖನಗಳಲ್ಲಿ ಮತ್ತೆ ಮತ್ತೆ ಮೈ ತಳೆಯುತ್ತವೆ. ಜಾಗತೀಕರಣದ, ಆಧುನೀಕರಣದ ಸೆಳೆತಗಳು ಮನುಷ್ಯ ಸಂಬಂಧವನ್ನು ಕುಬ್ಜಗೊಳಿಸುವ ಸಂದರ್ಭದಲ್ಲಿಯೇ ಸಂದು ಹೋದ ಕಾಲಘಟ್ಟವೊಂದರ ನಿರಂತರ ಕಾಯ್ದಿಡುವ ಕಳ್ಳುಬಳ್ಳಿಗಳ ಕಕ್ಕುಲಾತಿ ಸಂಬಂಧವನ್ನು ಇಲ್ಲಿ ಮರುಜೀವಿಸುವ ಪ್ರಯತ್ನ ಮಾಡಲಾಗಿದೆ. ಎಚ್.ಎಲ್. ನಾಗೇಗೌಡರ 'ದೊಡ್ಡಮನೆ'ಯಂಥ ವಿಶಾಲವಾದ ಬದುಕು ಇಲ್ಲಿ ಮೈತಳೆಯುತ್ತದೆ. ಬೆಸಗರಹಳ್ಳಿ ರಾಮಣ್ಣನವರ ಕಥನ ಲೋಕದ ಕಳ್ಳುಬಳ್ಳಿ ವಿಶಾಲವಾದ ಮರವೆಯ ಬದುಕೋದು ಇಲ್ಲಿ ಮತ್ತೆ ಜೀವ ಪಡೆಯುತ್ತದೆ.

■ **ಅಮೃತಮತಿ**

## ಮಾತೇ ಮುತ್ತು

★ ಕೆಟ್ಟ ಉದ್ದೇಶದೊಂದಿಗೆ ಹೇಳಿದ ಸತ್ಯ, ನೀವು ಸೃಷ್ಟಿಸಬಹುದಾದ ಎಲ್ಲ ಸುಳ್ಳುಗಳನ್ನೂ ಮೀರಿಸುತ್ತದೆ.

—ವಿಲಿಯಂ ಬ್ಲೇಕ್

★ ತಲೆಯೆತ್ತಿ ನಡೆಯಲು ಹಣ ಸಹಾಯ ಮಾಡುವುದಿಲ್ಲ.

—ಉಮರ್ ಬಿನ್ ಖತ್ತಾಬ್

★ ಎಲ್ಲ ದುರಂತಗಳೂ ಸಾವಿನೊಂದಿಗೆ ಕೊನೆಗೊಳ್ಳುತ್ತವೆ; ಎಲ್ಲ ತಮಾಷೆಗಳೂ ಮದುವೆಯೊಂದಿಗೆ ಕೊನೆಗೊಳ್ಳುತ್ತವೆ.

—ಲಾರ್ಡ್ ಬೈರನ್